# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 326

2) ಸದಸ್ಯರ ಹೆಸರು : ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು)

3) ಉತ್ತರಿಸಬೇಕಾದ ದಿನಾಂಕ : 13-08-2025

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸಮುದ್ರಗಳಲ್ಲಿ ಮೀನುಗಾರಿಕೆ ಮಾಡುವ ಮೀನುಗಾರರು ಸಮುದ್ರದಲ್ಲಿ ಮೀನುಗಾರಿಕೆ ಹೋಗುವಾಗ ಆಗುತ್ತಿರುವ ಅಪಘಾತ, ಸಾವುಗಳನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಈ ಬಗ್ಗೆ ರೂಪಿಸಲಾಗಿರುವ ಯೋಜನೆಗಳೇನು; | ಮೀನುಗಾರರು ಮೀನುಗಾರಿಕೆಗೆ ತೆರಳುವ ದೋಣಿಗಳಲ್ಲಿ ಕಡ್ಡಾಯವಾಗಿ ಮೀನುಗಾರರ ಸಂಖ್ಯೆಗೆ ಅನುಗುಣವಾಗಿ ಜೀವರಕ್ಷಕ ಸಾಧನಗಳಾದ ಲೈಫ್‌ಜಾಕೆಟ್ ಮತ್ತು ಲೈಫ್‌ಬಾಯ್ ಇರುವುದನ್ನು ಖಚಿತಪಡಿಸಿಕೊಂಡ ನಂತರವೇ ಮೀನುಗಾರಿಕೆ ಇಲಾಖೆಯು ಮೀನುಗಾರರಿಗೆ ಪರವಾನಗಿ ನೀಡುತ್ತಿದೆ. ಹಾಗು ಜೀವರಕ್ಷಕ ಸಾಧನಗಳ ಬಗ್ಗೆ ಮೀನುಗಾರರಿಗೆ ನಿಯಮಿತವಾಗಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br><br>ಮುನ್ಸೂಚಿತ ಹವಾಮಾನ ವರದಿಗಳನ್ನು ಸಾರ್ವಜನಿಕವಾಗಿ ಲಭ್ಯವಾಗುವಂತೆ ಹಾಗೂ ವಿಶೇಷವಾಗಿ ಮೀನುಗಾರರಿಗೆ ತಲುಪುವಂತೆ ವಿವಿಧ ಮಾಧ್ಯಮಗಳ (Whatsapp) ಮುಖಾಂತರ ಪ್ರಚಾರ ಪಡಿಸಲಾಗುತ್ತಿದೆ.<br><br>ರಾಜ್ಯದ ಕರಾವಳಿ ತೀರದ ಮೀನುಗಾರಿಕೆ ಬಂದರುಗಳು, ಇಳಿದಾಣ ಕೇಂದ್ರಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಸಾಮಾಜಿಕ ಮಾಧ್ಯಮಗಳಲ್ಲಿ ಮತ್ತು ಮೀನುಗಾರರ ವೈಯಕ್ತಿಕ ದೂರವಾಣಿ ಸಂಖ್ಯೆಗೆ ಮುನ್ನೆಚ್ಚರಿಕೆ ಸಂದೇಶಗಳನ್ನು ಹಂಚಿಕೊಳ್ಳಲಾಗುತ್ತಿದೆ.<br><br>ಹಾಗೆಯೇ, ಕರಾವಳಿ ತೀರದ ಪಂಚಾಯಿತಿಗಳಿಂದ ಮೀನುಗಾರರು ಹೆಚ್ಚು ಇರುವ ಗ್ರಾಮಗಳಲ್ಲಿ ಮುನ್ನೆಚ್ಚರಿಕೆಯ ಪ್ರಕಟಣೆಯನ್ನು ಟಾಮ್‌ಟಾಮ್ ಹಾಗೂ ಭಿತ್ತಿಪತ್ರಗಳನ್ನು ಹಂಚುವ ಮೂಲಕ ಪ್ರಚಾರ ಪಡಿಸಲಾಗುತ್ತಿದೆ.<br><br>ಮೀನುಗಾರರ ಹಾಗೂ ಅವರ ದೋಣಿಗಳ ಸುರಕ್ಷತೆಗಾಗಿ ISRO ಅಭಿವೃದ್ಧಿಪಡಿಸಿರುವ GPS ಆಧಾರಿತ ದ್ವಿಮುಖ ಸಂವಹನ (Two-way communication) ಸಂವಹನ ವ್ಯವಸ್ಥೆಯನ್ನು ಎಲ್ಲಾ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಲ್ಲಿ ಅಳವಡಿಸಲಾಗುತ್ತಿದೆ. ಇದರಿಂದ ಸಮುದ್ರದಲ್ಲಿ ವಾತಾವರಣದ ವೈಪರೀತ್ಯಗಳಿರುವ ವೇಳೆ ಮೀನುಗಾರರ ಜೀವಕ್ಕೆ ಅಪಾಯವಾಗುವ ಸಾಧ್ಯತೆಗಳಿರುವ ಸಂದರ್ಭಗಳಲ್ಲಿ ಸಂರಕ್ಷಣಾ ಪಡೆಗೆ ತಕ್ಷಣ ಮಾಹಿತಿ ರವಾನಿಸಲು ಹಾಗೂ ಅಪಾಯದಲ್ಲಿರುವ ಮೀನುಗಾರರಿಗೆ ಸಂರಕ್ಷಣಾ ಪಡೆಯು ಮಾಹಿತಿ ರವಾನಿಸಲು ಸಹಕಾರಿಯಾಗಿರುತ್ತದೆ. |

| | | |
|---|---|---|
| ಆ) | ಇಂತಹ ಅಪಘಾತದಿಂದ ಮೀನುಗಾರರನ್ನು ತಕ್ಷಣವೇ ರಕ್ಷಿಸಲು ಕರಾವಳಿ ಪಡೆಯಿಂದ ಹೆಲಿಕಾಪ್ಟರ್ ಅಥವಾ ಸರ್ವರುತುವಿನಲ್ಲೂ ಮೀನುಗಾರರ ರಕ್ಷಣೆಗೆ ಬರುವ ತಂತ್ರಜ್ಞಾನದ ಬೋಟನ್ನು ಯಾವಾಗ ಪರಿಚಯಿಸ ಲಾಗುವುದು; | ಅಪಘಾತದಿಂದ ಮೀನುಗಾರರನ್ನು ತಕ್ಷಣವೇ ರಕ್ಷಿಸಲು ಕರಾವಳಿ ಕಾವಲು ಪಡೆಯವರ ಹತ್ತಿರ ಯಾವುದೇ ಹೆಲಿಕಾಪ್ಟರ್ ವ್ಯವಸ್ಥೆ ಇರುವುದಿಲ್ಲ. ತುರ್ತು ಸಂದರ್ಭಗಳಲ್ಲಿ ಭಾರತೀಯ ತಟ ರಕ್ಷಣ ಪಡೆಯ ಹೆಲಿಕಾಪ್ಟರ್ ಸೇವೆಯನ್ನು ಪಡೆಯಲಾಗುತ್ತಿದೆ.<br>ಆದರೆ, ಸಮುದ್ರ ಮೀನುಗಾರಿಕೆಗೆ ತೆರಳಿದಾಗ ಅಪಘಾತ / ಅನಾರೋಗ್ಯಕ್ಕೆ ಒಳಗಾಗುವ ಮೀನುಗಾರರನ್ನು ತ್ವರಿತವಾಗಿ ದಡಕ್ಕೆ ತರಲು ಸಮುದ್ರ ಅಂಬ್ಯೂಲೆನ್ಸ್ ಖರೀದಿಸುವ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/101/ಮೀಇಯೋ/2025 ದಿನಾಂಕ: 07-07-2025 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಅದರಂತೆ, ದೋಣಿಯನ್ನು ನಿರ್ಮಿಸಲು ಕಾರ್ಯಾದೇಶ ನೀಡಲಾಗಿದೆ. |
| ಇ) | ಪ್ರತಿಯೊಂದು ಜೀವ ಹಾನಿಗೆ ಹಾಲಿ ಒದಗಿಸಲಾಗುತ್ತಿರುವ ಪರಿಹಾರವನ್ನು ದುಪ್ಪಟ್ಟು ಮಾಡಲು ಸರ್ಕಾರ ಮುಂದಾಗುವುದೇ; | ಚಾಲ್ತಿಯಲ್ಲಿದ್ದ ರೂ.6.00 ಲಕ್ಷಗಳ ಪರಿಹಾರ ಮೊತ್ತವನ್ನು 2024-25ನೇ ಸಾಲಿನಿಂದ ರೂ.10.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ ಆದ್ದರಿಂದ, ಪರಿಹಾರದ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| ಈ) | ಮನೆ ಮಾಲೀಕರನ್ನು ಕಳೆದುಕೊಂಡ ಬಡ ಮೀನುಗಾರರ ಕುಟುಂಬದ ಮಕ್ಕಳಲ್ಲಿ ಒಬ್ಬರಿಗೆ ಸರ್ಕಾರದ ಮಟ್ಟದಲ್ಲಿ ಕನಿಷ್ಟ ಪಕ್ಷ ಗ್ರೂಪ್ "ಡಿ" ನೌಕರಿಯನ್ನು ನೀಡಿ ಅವರ ಬದುಕಿಗೆ ಆಸರೆಯಾಗಲು ಕ್ರಮವಹಿಸಲಾಗುವುದೇ? | ಈ ರೀತಿಯ ಯಾವುದೇ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದೆ ಇರುವುದಿಲ್ಲ. |

ಸಂಖ್ಯೆ: ಪಸಂಮೀ ಇ-122 ಮೀಇಇ 2025

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು